ಆಕ್ಸ್‌ಫರ್ಡ್ ರಸ್ತೆಯಲ್ಲಿ ಹೋಗುತ್ತಿದ್ದೆವು.

ಅಚಾನಕ್ಕಾಗಿ ನನ್ನ ಸಹಪ್ರಯಾಣಿಕ ಒಂದು ಕಪ್ಪು ಬೆಲ್ಟನ್ನು ಎತ್ತಿ ತೋರಿಸಿದ. 'ಗುರೂ, ಈ ಮೊದಲು ಇದನ್ನು ನೋಡಿರುವೆಯಾ?'

ಬೆಲ್ಟಿನ ತುದಿಯಲ್ಲಿ ಒಂದು ಅಪೂರ್ವ ವಿನ್ಯಾಸದ ಬಕಲ್ ತೂಗಾಡುತ್ತಿತ್ತು.

'ಹೇಯ್! ಅದು ನನ್ನ ಬೆಲ್ಟು. ನಿನಗೆಲ್ಲಿ ಸಿಕ್ಕಿತು?' ನಾನು ವಿಸ್ಮಯದಿಂದ ಕೇಳಿದೆ.

'ಮತ್ತೆಲ್ಲಿ? ಅದು ನಿನ್ನ ಸೊಂಟಕ್ಕೆ ಸುತ್ತಿಕೊಂಡಿತ್ತು.' ಅವನು ತುಂಟ ನಗೆ ನಕ್ಕು ಉತ್ತರಿಸಿದ.

ನಾನು ನನ್ನ ಪ್ಯಾಂಟಿನ ಮೇಲೆ ಕೈಯಾಡಿಸಿದೆ. ಅಲ್ಲಿ ಬೆಲ್ಟ್ ಇರಲಿಲ್ಲ.

'ಇದು ಸಾಧ್ಯನೇ ಇಲ್ಲ. ಬೆಲ್ಟ್ ತೆಗೆಯಬೇಕಾದರೆ ಬಕ್ಕಲ್ ಬಿಚ್ಚಬೇಕು, ಪ್ಯಾಂಟಿನ ಏಳೆಂಟು ಲೂಪುಗಳಲ್ಲಿ ತೂರಿಕೊಂಡಿರುವ ಬೆಲ್ಟನ್ನು ಗೊತ್ತಾಗದಂತೆ ತೆಗೆಯುವುದು ಸಾಧ್ಯನೇ ಇಲ್ಲ.' ನಾನೆಂದೆ.

'ಆದರೂ, ನಿನಗೆ ಗೊತ್ತಾಗದಂತೆ ನಾನು ತೆಗೆದಿದ್ದೇನಲ್ಲ?'

ಅವನು ಬೆಲ್ಟನ್ನು ಸೀಟಿನ ಮೇಲಿಟ್ಟು ಕೈಯನ್ನು ಮೇಲೆತ್ತಿದ. ಅವನ ಬೆರಳುಗಳಲ್ಲಿ ಒಂದು ಶೂ ಲೇಸ್ ಜೋತಾಡುತ್ತಿತ್ತು.

'ಇದಕ್ಕೇನಂತಿಯಾ ಗುರು?' ಅವನು ತುಂಟ ನಗೆ ಬೀರುತ್ತಾ ಕೇಳಿದ.

'ಅದು ಶೂ ಲೇಸು. ಅದರಲ್ಲೇನು ವಿಶೇಷ?'

'ಅದನ್ನು ಯಾರೋ ಕಳೆದುಕೊಂಡಿದ್ದಾರೆ!'

ನಾನು ತಕ್ಷಣ ನನ್ನ ಶೂಗಳನ್ನೊಮ್ಮೆ ನೋಡಿದೆ... ಒಂದು ಶೂಸಿನ ಲೇಸ್ ಕಾಣಿಸುತ್ತಿರಲಿಲ್ಲ!

'ದೇವರೇ! ಇದೂ ನಿನ್ನದೇ ಕೆಲಸ? ಇದನ್ನು ಯಾವಾಗ ಬಿಚ್ಚಿದೆ ಮಾರಾಯಾ? ನೀನು ಕೆಳಗೆ ಬಗ್ಗಿದ್ದೇ ನನಗೆ ಗೊತ್ತಾಗಲಿಲ್ಲ' ಎಂದು ನಾನು ಚಕಿತನಾಗಿ ಕೇಳಿದೆ.

'ಏಕೆ ಗೊತ್ತಾಗಲಿಲ್ಲವೆಂದೂ ನಿನಗೆ ಗೊತ್ತು.'

'ಇದೇ ನಿನ್ನ ಕೈಬೆರಳುಗಳು ವಿಶೇಷ?'

'ಸರಿಯಾಗಿಯೇ ಹೇಳಿದೆ ಗುರು.' ಅವನು ಹಿಂದಕ್ಕೊರಗಿ ಸಂತೃಪ್ತಿಯಿಂದ ಸಿಗರೇಟನ್ನು ಎಳೆಯತೊಡಗಿದ.

'ಟೈಮೆಷ್ಟಾಯ್ತು?' ಅವನು ಕೇಳಿದ. 'ನನಗೆ ಕಾರಿನ ಗಡಿಯಾರದ ಮೇಲೆ ನಂಬಿಕೆಯಿಲ್ಲ.'

ನಾನು ಕೈಗಡಿಯಾರದ ಮೇಲೆ ದೃಷ್ಟಿ ಹರಿಸಿದೆ. ಆದರೆ ಅದು ಅಲ್ಲಿರಲಿಲ್ಲ! ನಾನು ಅವನನ್ನು ನೋಡಿದೆ. ಅವನೂ ನನ್ನನ್ನೇ ನೋಡಿದ. ಅವನ ತುಟಿಗಳ ಮೇಲೆ ನಗು ಅರಳಿತ್ತು.

ಅವನು ಕೈಯನ್ನು ಬಿಡಿಸಿ ತೋರಿಸಿದ. ಅಲ್ಲಿ ನನ್ನ ವಾಚಿತ್ತು.

'ಇದು ನಿಜಕ್ಕೂ ಬೆಲೆ ಬಾಳುವ ವಾಚು. 18 ಕ್ಯಾರೆಟ್. ಮಾರಲಿಕ್ಕೆ ಬಹಳ ಸುಲಭ.'

'ನೀನು ಮಾರುವ ಆಲೋಚನೆಯನ್ನು ಬಿಟ್ಟು ಬಿಡು. ನನಗದು ಬೇಕು.'

'ನಿನ್ನ ಯಾವ ವಸ್ತುವೂ ನನಗೆ ಬೇಡ ಗುರು. ನೀನು ನನಗೆ ಲಿಫ್ಟ್ ಕೊಟ್ಟಿರುವುದು ಅಷ್ಟೇ ಅಲ್ಲ, ನೀನು ನನ್ನ ಗೆಳೆಯ. ನನ್ನ ವೃತ್ತಿಯ ಬಗ್ಗೆ ನೀನು ಕೇಳಿದೆ. ನಾನು ಉತ್ತರ ಕೊಟ್ಟೆ ಅಷ್ಟೇ.'

'ನಿನ್ನ ಬಳಿ ನನ್ನ ಬೇರ್‍ಯಾವ ವಸ್ತುಗಳಿವೆ?' ನಾನು ಆತಂಕದಿಂದ ಕೇಳಿದೆ.

ಅವನು ನಗೆಯಾಡುತ್ತಾ ಒಂದೊಂದೇ ವಸ್ತುಗಳನ್ನು ಹೊರತೆಗೆದ. ಡ್ರೈವಿಂಗ್ ಲೈಸನ್ಸ್, ನಾಲ್ಕು ಕೀಗಳ ಒಂದು ಗೊಂಚಲು, ಕೆಲವು ಒಂದು ಪೌಂಡಿನ ನೋಟುಗಳು, ಕೆಲವು ನಾಣ್ಯಗಳು, ಪ್ರಕಾಶಕರೊಬ್ಬರ ಪತ್ರ, ಸಿಗರೇಟ್ ಲೈಟರ್, ಡೈರಿ, ನನ್ನ ಹೆಂಡತಿಯ ಒಂದು